ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳ ಅಕ್ಕಪಕ್ಕಗಳಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ಮಾಡುವುದನ್ನು [illegible] ತಡೆಗಟ್ಟುವ ಮತ್ತು ಅತಿಕ್ರಮಣಗಳನ್ನು ತೆರವು ಮಾಡುವ ವಿಚಾರ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯುಡಿ [illegible] ದಿನಾಂಕ:- 18-2-1976.

2) ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಡಬ್ಲ್ಯುಡಿ 3: 46: ಸಿಎಸ್‌ಸಿ: 88: ದಿನಾಂಕ:- 09-05-1988.

3) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ) ಬೆಂಗಳೂರು ಅವರ ಪತ್ರ ಸಂಖ್ಯೆ: ಸಿಇಸಿ: ಆರ್‌ಡಿಎಸ್: ಎಇ-1: ಭೂವೇ ಸುತ್ತೋಲೆ :98 ದಿನಾಂಕ:- 2ನೇ ಸೆಪ್ಟೆಂಬರ್ 1998.

– – – – –

ಪ್ರಸ್ತಾವನೆ:-

ಉಲ್ಲೇಖಿತ ಸರ್ಕಾರಿ ಆದೇಶ (1) ರಲ್ಲಿ ರಸ್ತೆಯ ಮಧ್ಯ ಭಾಗದಿಂದ ಕಟ್ಟಡಗಳ ನಿಯಂತ್ರಣ ರೇಖೆ ಹಾಗೂ ರಸ್ತೆಯ ಅಗಲದ ನಿಯಂತ್ರಣ ರೇಖೆಯನ್ನು ಇಂಡಿಯನ್ ರೋಡ್ ಕಾಂಗ್ರೇಸ ಅನ್ವಯ ಇರಬೇಕೆಂದು ಆದೇಶಿಸಿದೆ.

ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆ ಭೂಮಿಯಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗುತ್ತಿರುವುದು ಮತ್ತು ರಸ್ತೆಗೆ ಸೇರಿದ ಭೂಮಿಯು ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದ, ಈ ವಿಷಯದಲ್ಲಿ ಒಂದು ಸುತ್ತೋಲೆಯನ್ನು (ಪಿಡಬ್ಲ್ಯುಡಿ 46 ಸಿಎಸ್‌ಸಿ' 88, ದಿನಾಂಕ 09-05-1988) ಹೊರಡಿಸಿ, ಈ ಕೆಳಗೆ ನಮೂದಿಸಿರುವ ಕೆಲವು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶಿಸಲಾಗಿತ್ತು.

(1) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆ ಮಧ್ಯ ಭಾಗದಿಂದ ಈ ಕೆಳಗೆ ಸೂಚಿಸಿರುವ ಫಾಸಲೆಕ್ಕೆ ಒಳಗಾದ ಕಟ್ಟಡಗಳನ್ನು ನಿರ್ಮಿಸಕೂಡದು, ಅಲ್ಲದೇ ಈ ಪರಿಮಿತಿಯಲ್ಲಿ ಕಟ್ಟಡ ನಿರ್ಮಾಣ ಮತ್ತು ಅಂಗಡಿಗಳು, ಉಪಾಹಾರ ಗೃಹಗಳು, ಪೆಟ್ರೋಲ್ ಬಂಕುಗಳು, ಮುಂತಾದವುಗಳನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಡತಕ್ಕದ್ದಲ್ಲ.

		ರಸ್ತೆ ಮಧ್ಯಭಾಗದಿಂದ ದೂರ
ಅ) ರಾಷ್ಟ್ರೀಯ ಹೆದ್ದಾರಿಗಳು	...	40 ಮೀಟರ
ಆ) ರಾಜ್ಯ ಹೆದ್ದಾರಿಗಳು	...	40 ಮೀಟರ
ಇ) ಮುಖ್ಯ ಜಿಲ್ಲಾ ರಸ್ತೆಗಳು	...	25 ಮೀಟರ

(2) ಈಗಾಗಲೇ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿದ್ದಲ್ಲಿ ಅಂತಹವುಗಳನ್ನು ತೆರವು ಮಾಡಲು ಸೂಕ್ತ ಕ್ರಮವನ್ನು ಕಾನೂನಿನಂತೆ ತೆಗೆದುಕೊಳ್ಳಬೇಕು.

(3) ರಸ್ತೆಗಳಿಗೆ ಸೇರಿರುವ ಭೂಮಿಯ ಜಾಗವನ್ನು ಗುರುತಿಸಿ, ಆ ಭಾಗದಲ್ಲಿ ಯಾರಾದರೂ ಅನಧಿಕೃತವಾಗಿ ಅತಿಕ್ರಮಣ ಮಾಡಿದ್ದಲ್ಲಿ ತೆರವು ಮಾಡಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಹಿನ್ನೆಲೆ :-

ಅ) ಹೆದ್ದಾರಿಗಳ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ ಕಟ್ಟಡಗಳನ್ನು ಹೊರತುಪಡಿಸಿ, ಹೊಸ ಪೆಟ್ರೋಲ್ ಅಥವಾ ಡೀಸೆಲ್ ಪಂಪುಗಳು ಮತ್ತು ಅವಕ್ಕೆ ಸೇರಿದಂತೆ ಆಹಾರ ಸ್ಥಳಗಳನ್ನು ಹೊರತಾದ ಬೇರೆ ಯಾವುದೇ ರೀತಿಯ ನಿರ್ಮಾಣ ಚಟುವಟಿಕೆಗಳನ್ನು ತೆಗೆದುಕೊಳ್ಳಲು ಅನುಮತಿಯನ್ನು ಕೊಡಬಾರದು.

ಆ) ರಸ್ತೆಯ ಮಧ್ಯ ಭಾಗದಿಂದ 40 ಮೀಟರ್‌ಗಳ ವರೆಗೆ ಯಾವುದೇ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ಕೊಡತಕ್ಕದ್ದಲ್ಲ.

ಇ) ಬೈಪಾಸ ರಸ್ತೆ ಪಕ್ಕದಲ್ಲಿ ಹೊಸದಾಗಿ ಯಾವುದೇ ಬಡಾವಣೆಗಳು ಬರದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಮತ್ತು ಬೈಪಾಸ್ ರಸ್ತೆ ಯಾವ ಉದ್ದೇಶಕ್ಕಾಗಿ ನಿರ್ಮಿಸಲಾಗಿದೆಯೋ ಆ ಉದ್ದೇಶಕ್ಕೆ ಪೂರ್ಣವಾಗಿ ಉಪಯೋಗವಾಗುವಂತೆ ನೋಡಿಕೊಳ್ಳತಕ್ಕದ್ದು.

5) ಮೇಲ್ಕಂಡ ವಿಷಯಗಳ ಬಗ್ಗೆ ಮುಖ್ಯ ಇಂಜಿನಿಯರುಗಳು, ಅಧೀಕ್ಷಕ ಇಂಜಿನಿಯರುಗಳು ಪ್ರತಿ ತ್ರೈಮಾಸಿಕ ಸಭೆಯಲ್ಲಿ ಈ ವಿಷಯಗಳನ್ನು ಪರಿಶೀಲಿಸಬೇಕು ಮತ್ತು ಕ್ರಮ ತೆಗೆದುಕೊಂಡಿರುವ ಬಗ್ಗೆ ಪ್ರತಿ ತಿಂಗಳು ಸರ್ಕಾರಕ್ಕೆ ವರದಿಯನ್ನು ಕಳುಹಿಸಬೇಕು.

ಇದು ಕೇವಲ ಸುತ್ತೋಲೆ ಆಗಿರುವುದರಿಂದ, ನ್ಯಾಯಾಲಯದಲ್ಲಿ ಸ್ಥಾಪಿತವಾಗಿ, ಜಾರಿ ಮಾಡಲು ತೆಗೆದುಕೊಳ್ಳಲಾಗುತ್ತಿಲ್ಲ. ಇದರಿಂದ ಇಂತಹ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿವೆ. ಈ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತಿಲ್ಲ. [illegible] ಸುತ್ತೋಲೆಗೆ ಬದಲಾಗಿ, ವಿಭಾಗ ವರ್ಗೀಕರಣ ರಸ್ತೆಗಳಿಗೂ ಅನ್ವಯಿಸುವಂತೆ ಒಂದು ಸರ್ಕಾರದ ಆದೇಶವನ್ನು ಹೊರಡಿಸುವುದು ಅವಶ್ಯಕವೆಂದು ಕಂಡುಬಂದಿದೆ.

ಈ ವಿಷಯಕ್ಕೆ ಸಂಬಂಧಪಟ್ಟಂತೆ, ಐ.ಆರ್.ಸಿ. ಯವರು ಹೊರಡಿಸಿದ ಪ್ರಕಟಣೆ 45 – ರಾಜ್ಯ ಹೆದ್ದಾರಿಗಳ ಅಕ್ಕಪಕ್ಕಗಳಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ ಮತ್ತು ಅದರ ತಡೆ (prevention of Ribbon Development along Highways) ಇದರ ಉದ್ಧೃತ ಭಾಗ ಅನುಬಂಧ (1) ಮತ್ತು (2) ರಲ್ಲಿ ವಿವಿಧ ವರ್ಗದ ರಸ್ತೆಗಳನ್ನು ಗಮನಕ್ಕೆ ತೆಗೆದುಕೊಂಡು, ನಿಯಂತ್ರಣ ಪ್ರಮಾಣ ಅಂತರಗಳನ್ನು ನಿಗದಿಪಡಿಸಲಾಗಿದೆ. ಆದ್ದರಿಂದ, ಈ ಐ.ಆರ್.ಸಿ. ಪ್ರಮಾಣವನ್ನು ಮೇಲಿನ ವಿಷಯದಲ್ಲಿ ಸ್ವೀಕರಿಸುವುದು ಸೂಕ್ತವೆಂದು ಕಂಡು ಬರುತ್ತದೆ.

ಅನುಬಂಧ (1) ಮತ್ತು (2) ಅನ್ನು ನಕಲಿನೊಂದಿಗೆ ಲಗತ್ತಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 362 ಸಿಆರ್‌ಎಂ 98, ಬೆಂಗಳೂರು, ದಿನಾಂಕ 09.10.1998

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರದ ಅನುಬಂಧ (1) ಮತ್ತು (2) ರ ಪ್ರಕಾರ, ಐ.ಆರ್.ಸಿ. ಪ್ರಮಾಣವನ್ನು ಅಂಗೀಕರಿಸಿ, ಸುತ್ತೋಲೆ ಸಂಖ್ಯೆ: ಲೋಇ 46 ಸಿಆರ್‌ಎಂ 88, ದಿನಾಂಕ 09-05-1988ರ ಸ್ಥಳದಲ್ಲಿ [illegible] (ಕ್ರಮ ಸಂಖ್ಯೆ 1 ರಿಂದ 5) [illegible] ಗಳನ್ನು ಮಾರ್ಪಡಿಸಿದೆ.

[illegible]

ANNEXURE - I

Extract from the I.R.C. Special Publication on Ribbon Development along Highways and its Prevention.

Table 1- LAND WIDTH FOR DIFFERENT CLASSES OF ROAD

Class of road	Land Width in Metres							
	Plain and rolling country				Mountainous and steep terrain			
	Rural Areas		Urban Areas		Rural Areas		Urban Areas	
	Normal	Range	Normal	Range	Normal	Excep-tional	Nor-mal	Excep-tional
National & State Highways	45	30-60	30	30-60	24	18	20	18
Major District Roads	25	25-30	20	15-25	18	15	15	12
Other District Roads	15	15-25	15	15-20	15	12	12	9
Village Roads	12	12-18	10	10-15	9	9	9	9

Table 2

STANDARDS FOR BUILDING LINES AND CONTROL LINES

Class of Road	Plain and rolling terrain			Mountainous and steep terrain-Distance between building lines and road boundry (Metres)			
	Rural Areas		Urban & Industrial areas	Rural Areas		Urban Areas	
	Width between Building Lines (Overall width (Metres)	Width between contre Lines (Overall width) (Metres)	Distance between building Lines & Road boun-dary (set-back dis-tance (Mtrs)	Nor-mal	Ex-cep-tio nal	Nor-mal	Ex-cep-tio nal
1. National & State Highways	80	150	3-6	5	3	5	3
2. Major District Roads	50	100	3	6	3	5	3
3. Other District Roads	25/30*	35	-	5	3	5	3
4. Village Roads	25	30	-	5	3	5	3

*If the land width is equal to the width between building lines indicated in this column, the building lines shall be set back 2.5 metres from the road land boundary lines.

ಓದಲಾದ (2)ರಲ್ಲಿನ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ. [illegible]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

[illegible]
ಡಾ. [illegible]
ಉಪ ಕಾರ್ಯದರ್ಶಿ, (ಸಂ.ಕ)
ಲೋಕೋಪಯೋಗಿ ಇಲಾಖೆ.

ಇವರಿಗೆ:—

(1) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ ವಲಯ) ಬೆಂಗಳೂರು —560 001.

(2) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ ವಲಯ) ಧಾರವಾಡ —580 001.

(3) ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಲಯ, ಕೆ.ಆರ್. ವೃತ್ತ, ಬೆಂಗಳೂರು —560 001.

(4) ಲೋಕೋಪಯೋಗಿ ಇಲಾಖೆಯ ಮತ್ತು ರಾಷ್ಟ್ರೀಯ ಹೆದ್ದಾರಿ ವಲಯದ ಎಲ್ಲಾ ಅಧೀಕ್ಷಕ ಇಂಜಿನಿಯರ್ ರವರುಗಳಿಗೆ.

(5) ಎಲ್ಲಾ ಜಿಲ್ಲಾಧಿಕಾರಿಗಳಿಗೆ.

(6) ಜಿಲ್ಲಾ ಪಂಚಾಯತ್‌ಗಳ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

(7) ಲೋಕೋಪಯೋಗಿ ಇಲಾಖೆ ಮತ್ತು ರಾಷ್ಟ್ರೀಯ ಹೆದ್ದಾರಿ ವಲಯದ ಎಲ್ಲಾ ಕಾರ್ಯಪಾಲಕ ಇಂಜಿನಿಯರ್ ರವರುಗಳಿಗೆ.

(8) ಸರ್ಕಾರದ ಉಪಕಾರ್ಯದರ್ಶಿಯವರು, ಲೋಕೋಪಯೋಗಿ ಇಲಾಖೆ (ಸಂಪರ್ಕ ಮತ್ತು ಕಟ್ಟಡಗಳು) ಬಹು ಮಹಡಿ ಕಟ್ಟಡ, ಬೆಂಗಳೂರು—1.

(9) ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸಂಪರ್ಕ—2), ಬಹು ಮಹಡಿ ಕಟ್ಟಡ, ಬೆಂಗಳೂರು —560 001.

(10) ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಕಟ್ಟಡಗಳು: [illegible] (ನಗರ): (ಇ.ಎ.ಪಿ). ಬಹು ಮಹಡಿ ಕಟ್ಟಡ, ಬೆಂಗಳೂರು—1.

(11) ಸರ್ಕಾರದ ಕಾರ್ಯದರ್ಶಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯವರ ಆಪ್ತ ಸಹಾಯಕರು, ವಿಧಾನ ಸೌಧ, ಬೆಂಗಳೂರು —1.

(12) ಸರ್ಕಾರದ ಉಪ ಕಾರ್ಯದರ್ಶಿಯವರು, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ, (ಕಾನೂನು ಕೋಶ) ರವರ ಆಪ್ತ ಸಹಾಯಕರು, ಬಹು ಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು —560 001.

(13) ಹೆಚ್ಚುವರಿ ಪ್ರತಿಗಳು.

(14) ರಕ್ಷಾ ಕಡತ.

— — — —






Fig.3.1 Roadland boundary, building lines and control lines.

SHOWING BUILDING LINE




NATIONAL HIGHWAY AND STATE HIGHWAY (RURAL)




NATIONAL HIGHWAY (URBAN)

BUILDING LINE DETAILS FOR STATE HIGHWAY (URBAN)


1. City Corporation, C.M.C, T.M.C, T.P, G.P Limits - 6 mts from road edge.
2. From City Corporation limits upto 15Km - 12mts
3. From C.M.C limits upto 10Km - 12mts
4. From T.M.C , T.P , G.P limits upto 5Km - 12 mts




STATE HIGHWAY (URBAN)




MAJOR DISTRICT ROAD (RURAL)




MAJOR DISTRICT ROAD (URBAN)




OTHER DISTRICT ROAD (RURAL)



OTHER DISTRICT ROAD (URBAN)



VILLAGE ROAD (RURAL)



VILLAGE ROAD (URBAN)

D:/MAMATHA/ROAD cl. 1.PLN